32

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE 12/1/2021

ಕಾಯ್ದೆ ಜಾರಿಗೆ ಏಕಿಲ್ಲ ತಡೆ?

ಕೇಂದ್ರದ ವಿರುದ್ಧ ಸುಪ್ರೀಂಕೋರ್ಟ್ ಆಕ್ರೋಶ

ನವದೆಹಲಿ: 'ಮೂರು ರೈತ ಕಾಯ್ದೆಗಳನ್ನು ಜಾರಿ ಮಾಡುವುದನ್ನು ನಿಲ್ಲಿಸುತ್ತೀರೋ? ಅಥವಾ ನಾವೇ ಆ ಕ್ರಮಕ್ಕೆ ಮುಂದಾಗಬೇಕೋ?' ಹೀಗೆಂದು ಸೋಮವಾರ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಖಡಕ್ ಆಗಿ ಕೇಳಿದೆ. ರೈತರ ಪ್ರತಿಭಟನೆ ವಿಚಾರವನ್ನು ನಿಭಾಯಿಸುತ್ತಿರುವ ಸರ್ಕಾರದ ಕ್ರಮ 'ನಿಜಕ್ಕೂ ನಿರಾಶಾದಾಯಕ' ಎಂದು ಮುಖ್ಯ ನ್ಯಾಯಮೂರ್ತಿ ಎಸ್.ಎ.ಬೋಬ್ಡೆ ನೇತೃತ್ವದ ನ್ಯಾಯಪೀಠ ಆಕ್ಷೇಪಿಸಿದೆ. ಇದೇ ವೇಳೆ ವಿವಾದಿತ ಕಾಯ್ದೆಗಳು ಮತ್ತು ಸಂಬಂಧಿತ ವಿಚಾರಗಳಿಗೆ ಮಂಗಳವಾರ ತೀರ್ಪು ನೀಡುವುದಾಗಿ ನ್ಯಾಯಪೀಠ ಹೇಳಿದೆ.

ಸುಪ್ರೀಂಕೋರ್ಟ್‌ನಲ್ಲಿ ಮುಖ್ಯ ನ್ಯಾಯಮೂರ್ತಿ ನೇತೃತ್ವದ ನ್ಯಾಯಪೀಠ ಪರಿಸ್ಥಿತಿ ನಿಭಾಯಿಸುತ್ತಿರುವ ಕ್ರಮದ ಬಗ್ಗೆಯೇ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಕೇಂದ್ರ ಸರ್ಕಾರ ಪರಿಸ್ಥಿತಿಯನ್ನು ಉತ್ತಮವಾಗಿಯೇ ನಿಭಾಯಿಸಿದೆ. ಇದರ ಹೊರತಾಗಿಯೂ ಕಟುವಾಗಿ ಆಕ್ಷೇಪ ಮಾಡುವುದು ಸರಿಯಲ್ಲ ಎಂದು ನ್ಯಾಯಪೀಠಕ್ಕೆ ಹೇಳಿದರು.

'ಏನಾದರೂ ಅನಾಹುತವಾದರೆ ನೀವೆಲ್ಲರೂ ಹೊಣೆಗಾರರಾಗಬೇಕಾಗುತ್ತದೆ. ನಮ್ಮ ಕಾರಣದಿಂದಲಾಗಿ ರಕ್ತಪಾತವೋ ಅಥವಾ ಇನ್ನು ಯಾವುದೋ ಸಮಸ್ಯೆ ಉಂಟಾಗುವುದು ನಮಗೆ ಬೇಕಾಗಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿ ಖಡಕ್ ಆಗಿ ಹೇಳಿದ್ದಾರೆ. ಕಾಯ್ದೆ ಜಾರಿಯಾಗುವುದನ್ನು ತಡೆಯಬೇಕೋ ಅಥವಾ ನಾವೇ ಕ್ರಮ ಕೈಗೊಳ್ಳಬೇಕೋ ಎಂದು ಪರೋಕ್ಷವಾಗಿ ಕಾಯ್ದೆಗಳಿಗೆ ತಡೆಯಾಜ್ಞೆ ನೀಡುವ ಸುಳಿವನ್ನೂ ಮುಖ್ಯ ನ್ಯಾಯಮೂರ್ತಿ ನೀಡಿದರು.

ನಿಮ್ಮ ಉಪನ್ಯಾಸ ಬೇಡ: ಸಮಸ್ಯೆ ಬಗೆಹರಿಸುವಲ್ಲಿ ಸರ್ಕಾರ ಏಕೆ ಬಿಗುಮಾನ ಪ್ರದರ್ಶಿಸಬೇಕು ಎಂದು ಸಿಜೆಐ ಅಟಾರ್ನಿ ಜನರಲ್‌ರನ್ನು ನೇರವಾಗಿಯೇ ಕೇಳಿದರು.

▶ 7ನೇ ಪುಟಕ್ಕೆ



ಸಿಜೆಐ ಹೇಳಿದ್ದೇನು?

- **ಕಾಯ್ದೆಪರಿಶೀಲನೆಗೆ ಸಮಿತಿ ರಚಿಸಿ**
- **ಕಾಯ್ದೆ ಜಾರಿ ಮಾಡಬಾರದೆಂಬ ಸಲಹೆ ಪಾಲನೆ ಏಕಿಲ್ಲ?**
- **ಮಾತುಕತೆಗಳು ಪದೇ ಪದೇ ವಿಫಲವಾಗುತ್ತಿವೆ**
- **ತಾಳ್ಮೆಯ ಬಗ್ಗೆ ನಿಮ್ಮ ಉಪನ್ಯಾಸ ಬೇಡ**

ಕಾಯ್ದೆ ಜಾರಿಗೆ ಏಕಿಲ್ಲ ತಡೆ?

1ನೇ ಪುಟದಿಂದ▶ ಸದ್ಯ ನಡೆಯುತ್ತಿರುವ ಮಾತುಕತೆಗಳ ವಿವರ ಕೋರ್ಟ್‌ಗೆ ಸಲ್ಲಿಸಲು ಇನ್ನೂ ಹೆಚ್ಚಿನ ಸಮಯ ಬೇಕು ಎಂದರು ಅಟಾರ್ನಿ ಜನರಲ್. ಅದಕ್ಕೆ ಉತ್ತರಿಸಿದ ಮುಖ್ಯ ನ್ಯಾಯಮೂರ್ತಿ 'ನಿಮ್ಮ ಕಡೆಯಿಂದ ಸರಿಯಾದ ನಿರ್ಧಾರ ಕೈಗೊಳ್ಳುವುದು ಕಾಣುತ್ತಿಲ್ಲ, ಹೀಗಾಗಿ, ನಾವೇ ಅದಕ್ಕೊಂದು ಪರಿಹಾರ ಕಂಡುಕೊಳ್ಳುತ್ತೇವೆ' ಎಂದರು.

ಅದೇ ಸಂದರ್ಭದಲ್ಲಿ ಕೆ.ಕೆ.ವೇಣುಗೋಪಾಲ್ 'ಆದೇಶ ನೀಡಲು ಅವಸರ ಏಕೆ' ಎಂದು ಹೇಳಿದ್ದಕ್ಕೆ ಕ್ರುದ್ಧಗೊಂಡ ನ್ಯಾ.ಬೋಬ್ಡೆ 'ತಾಳ್ಮೆಯ ಬಗ್ಗೆ ನಿಮ್ಮ ಉಪನ್ಯಾಸ ಬೇಡ. ಸಮಸ್ಯೆ ಪರಿಹರಿಸಲು ಸಾಕಷ್ಟು ಸಮಯಾವಕಾಶ ನೀಡಿದ್ದೇವೆ' ಎಂದರು. ಹಿಂದಿನ ವಿಚಾರಣೆ ವೇಳೆಯೇ ಈ ಬಗ್ಗೆ ಕೇಳಿದ್ದ ಪ್ರಶ್ನೆಗೆ ಇನ್ನೂ ಉತ್ತರ ಸಿಕ್ಕಿಲ್ಲ ಎಂದರು ಸಿಜೆಐ.

ಸಮಿತಿ ರಚಿಸಿ: ರಾಜ್ಯ ಸರ್ಕಾರಗಳು ಕಾಯ್ದೆ ವಿರುದ್ಧ ಧ್ವನಿ ಎತ್ತಿವೆ. ಸಮಸ್ಯೆ ಪರಿಹಾರಕ್ಕೆ ಸಮಿತಿಯನ್ನು ಏಕೆ ರಚನೆ ಮಾಡಬಾರದು ಎಂದು ನ್ಯಾಯಪೀಠ ಸರ್ಕಾರವನ್ನು ಪ್ರಶ್ನಿಸಿತು. ನಿವೃತ್ತ ಮುಖ್ಯ ನ್ಯಾಯಮೂರ್ತಿ ಆರ್.ಎಂ.ಲೋಧಾ ಸೇರಿದಂತೆ ಹಲವು ಖ್ಯಾತನಾಮರ ಹೆಸರನ್ನು ಮುಖ್ಯಸ್ಥರ ಸ್ಥಾನಕ್ಕೆ ಪರಿಗಣಿಸಬಹುದಲ್ಲವೇ ಎಂದು ಕೇಳಿತು ನ್ಯಾಯಪೀಠ. ನ್ಯಾಯಪೀಠ ಕಾಯ್ದೆಗಳಿಗೆ ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ, ಕೇವಲ 2-3 ರಾಜ್ಯಗಳ ರೈತರು ಮಾತ್ರ ಪ್ರತಿಭಟಿಸುತ್ತಿದ್ದಾರೆ ಎಂದರು ಅಟಾರ್ನಿ ಜನರಲ್. ರೈತರು ಮತ್ತು ಕೇಂದ್ರ ಸರ್ಕಾರದ ನಡುವೆ ಶುಕ್ರವಾರ 9ನೇ ಸುತ್ತಿನ ಮಾತುಕತೆ ನಡೆಯಲಿದೆ.

ಸಿದ್ದುಗೆ ಹಗಲೇ ಕನಸು ಬೀಳುತ್ತಿದೆ

ಗದಗ: ಎಲ್ಲರೂ ರಾತ್ರಿಯಲ್ಲಿ ಕನಸು ಕಂಡರೆ ಸಿದ್ದರಾಮಯ್ಯ ಅವರಿಗೆ ಹಾಡಹಗಲೇ ಕನಸು ಬೀಳುತ್ತದೆ ಎಂದು ವಸತಿ ಸಚಿವ ವಿ. ಸೋಮಣ್ಣ ವ್ಯಂಗ್ಯವಾಡಿದರು. ನಗರದ ತೋಂಟದಾರ್ಯ ಮಠಕ್ಕೆ ಭೇಟಿ ನೀಡಿ ಸಿದ್ದರಾಮ ಸ್ವಾಮೀಜಿಗಳ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು. ನಾನು ಏಳೆಂಟು ಜನ ಮುಖ್ಯಮಂತ್ರಿಗಳನ್ನು ಕಂಡಿದ್ದೇನೆ. ಈ ಸಮಾಜ ಜೆ.ಎಚ್. ಪಟೇಲ್, ನಿಜಲಿಂಗಪ್ಪ ಅವರಂತಹ ದೊಡ್ಡ ನಾಯಕರನ್ನು ನೀಡಿದೆ. ಈ ಸಮಾಜದಿಂದ ಮುಖ್ಯಮಂತ್ರಿಗಳು ಆದವರು ಎಲ್ಲ ವರ್ಗದ ಜನರ ಆಶೋತ್ತರ ಈಡೇರಿಸುವ ಕೆಲಸ ಮಾಡಿದ್ದಾರೆ. ಅದರಂತೆ ಯಡಿಯೂರಪ್ಪ ಅವರೂ ಜನಪರ ಕೆಲಸ ಮಾಡುತ್ತಿದ್ದಾರೆ ಎಂದರು.